ಮಾಡುತ್ತೇವೆಂದು ಹೇಳಿದ್ದಾರೆ. ಪ್ರವಾಸೋದ್ಯಮ ಅಭಿವೃದ್ಧಿ ಆಗಬೇಕಾದರೆ ವಿಶೇಷವಾಗಿ ಮಲೆನಾಡು ಪ್ರದೇಶದಲ್ಲಿ ಸಾಕಷ್ಟು ತಾಣಗಳು ಇವೆ. ಅವೆಲ್ಲಾವನ್ನು ನೋಡಬೇಕು. ಅದು ಆಗಬೇಕಾದರೆ ಅದರಲ್ಲಿ ಹೋಗುವಂಥ ಸಂಪರ್ಕ ವ್ಯವಸ್ಥೆಗಳು ಏನಿದೆ ರಸ್ತೆಗಳಿಗೆ ಹೆಚ್ಚು ಅನುದಾನವನ್ನು ಕೊಡುವಂಥ ಕೆಲಸವಾದರೆ ಮಾತ್ರ ಇದು ಸಾಧ್ಯ. ಕೇವಲ ಭಾಷಣದಲ್ಲಿ ಎಲ್ಲವನ್ನೂ ಮಾಡುತ್ತೇವೆಂದು ಹೇಳುವುದು ಸರಿಯಲ್ಲ. ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವಂಥ ಪ್ರಾಮಾಣಿಕ ಪ್ರಯತ್ನ ಆಗಬೇಕಾದರೆ ಸ್ವಲ್ಪ ಅಧಿಕಾರಿಗಳಿಗೆ ಬಿಸಿ ಮುಟ್ಟಿಸುವಂಥ ಕೆಲಸ ಆಗದೇ ಹೋದರೆ ಅಧಿಕಾರಿಗಳು ಹೇಳಿದ್ದನ್ನೇ ಕೇಳಿ ಕೆಲಸ ಮಾಡುವುದಾದರೆ ಖಂಡಿತ ಮಾಡಲಿಕ್ಕೆ ಸಾಧ್ಯವಿಲ್ಲ. ಅದನ್ನು ಮಾಡಬೇಕು. ಒಟ್ಟಿನಲ್ಲಿ ತಾವು ರಾಜ್ಯಪಾಲರ ಭಾಷಣವನ್ನು ಸದನದಲ್ಲಿ ಏನು ಹೇಳಿಸಿದ್ದೀರಿ ಆ ಭಾಷಣ ಅಭಿವೃದ್ಧಿಯ ದಿಕ್ಸೂಚಿ ಅಂತೂ ಅಲ್ಲ. ಮಾಮೂಲಿ ಭಾಷಣ ಆಗುವುದು ಬೇಡ. ವಂದನಾ ನಿರ್ಣಯವನ್ನು ಅನಿವಾರ್ಯವಾಗಿ ವಿರೋಧಿಸಲೇಬೇಕಾಗುತ್ತದೆ ಎಂಬ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಧನ್ಯವಾದಗಳು.

ಅಧ್ಯಕ್ಷರು : ಈಗ ಸದನವನ್ನು ಮುಂದೂಡಿ ಪುನಃ 2–30ಕ್ಕೆ ಸೇರೋಣ.

(ಸದನವು 1–28ಕ್ಕೆ ಮುಂದೂಡಲ್ಪಟ್ಟು ಪುನಃ 2–30ಕ್ಕೆ ಸೇರಲು ನಿಶ್ಚಯಿಸಿತು.)

(ಸದನವು ಪುನಃ ಮಧ್ಯಾಹ್ನ 2 ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು. ಸಭಾಧ್ಯಕ್ಷರಾದ ಶ್ರೀ ಕಾಗೋಡು ತಿಮ್ಮಪ್ಪ ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.)

ಶ್ರೀ ಹೆಚ್.ಸಿ.ಬಾಲಕೃಷ್ಣ : ಏನು ಮಾತನಾಡುವುದು, ಅಧ್ಯಕ್ಷರೆ? ಎಲ್ಲವನ್ನೂ ನಿಮಗೆ ಬಿಟ್ಟಿದ್ದೇವೆ. ಈಗ ನಾವು ಮಾತನಾಡಿದರೆ ನಮಗೆ ಗೌರವ ಕಡಿಮೆ, ಮಾತನಾಡುವುದು ಬೇಡ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಏನು ಮಾತನಾಡುವುದು, ಅಧ್ಯಕ್ಷರೆ? ಈ ವಿಷಯವನ್ನು ಪ್ರಸ್ತಾಪ ಮಾಡುವುದು ಬೇಡ ಎಂದು ಅಂದುಕೊಂಡಿದ್ದೇವೆ.

ಅಧ್ಯಕ್ಷರು : Time waste, no time. ಕೊಡಿ, ಕೊಡಿ, ಕೋರಂ ಆಗಿದೆ, Come on, Come on.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಸಚಿವರು ಯಾರೂ ಇಲ್ಲ.

ಅಧ್ಯಕ್ಷರು : ಇರುತ್ತಾರೆ. ಈಗ ಶೂನ್ಯ ವೇಳೆ.

ಶ್ರೀ ಗೋವಿಂದ ಎಂ. ಕಾರಜೋಳ : ಅವರಿಬ್ಬರನ್ನು ನೋಡಿ, ಅವರು ಮುಂದಿನ ಸಾಲಿನ ಸಚಿವರಲ್ಲ.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು :–

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ಅಧ್ಯಕ್ಷರೆ, ಶೂನ್ಯ ವೇಳೆ.

ಅಧ್ಯಕ್ಷರು : ಈಗ ಶೂನ್ಯವೇಳೆ. ಕಾರಜೋಳರವರು ಮಾತನಾಡಿ. ಬರುತ್ತಾರೆ. ಕಾರಜೋಳರವರು ಇಲ್ಲ. Next.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಕಾರಜೋಳರವರು ಇದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ : ನಾವು ಇದ್ದೇವೆ, ಸರ್.

ಅಧ್ಯಕ್ಷರು : ಸೀಟ್‌ನಲ್ಲಿ ಇಲ್ಲ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಬೆಳಿಗ್ಗೆ continue ಮಾಡಿದ್ದರೆ ಮುಗಿದು ಹೋಗುತ್ತಿತ್ತು.

ಅಧ್ಯಕ್ಷರು : ಆಗಿ ಹೋಯಿತು. ಹೇಳಿಬಿಟ್ಟಿದ್ದೇನಲ್ಲ. ಇದು ಆದ ಕೂಡಲೇ ಇನ್ನೂ ಅರ್ಧ ಗಂಟೆ, ನಂತರ ನಿಮ್ಮದೇ. ದಯವಿಟ್ಟು ಬಹಳ ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ : ನಾನು 4 ವಿಷಯಗಳನ್ನು ಕೊಟ್ಟಿದ್ದೇನೆ. ಯಾವುದರ ಬಗ್ಗೆ ಹೇಳಲಿ, ಸರ್?

ಅಧ್ಯಕ್ಷರು : ಪುರಸಭೆ ವ್ಯಾಪ್ತಿಯ ಮಹಾರಾಯನ ಕೆರೆಯಲ್ಲಿ ನೀರಿಲ್ಲದೆ.... ಈ ವಿಷಯದ ಬಗ್ಗೆ ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ : ಸನ್ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು : ನೀವು ದಯವಿಟ್ಟು subjectಗೆ ಬನ್ನಿ.

ಶ್ರೀ ಗೋವಿಂದ ಎಂ. ಕಾರಜೋಳ : subjectಗೆ ಬರುತ್ತಿದ್ದೇನೆ, ಸರ್. ಆದರೆ, ಅಧಿಕಾರಿಗಳಿಲ್ಲ.